

ಸೊಲೋಮನ್ ಪೀಠದ ಮೇಲಿಂದ ಕಾಣುವ ಓಶ್ ನಗರದ ವಿಹಂಗಮ ನೋಟ



ಕಿಂಗ್ ಸೊಲೋಮನ್ ಪೀಠ  ಮತ್ತು ಅದಕ್ಕೆ ಹೋಗುವ ಮೆಟ್ಟಿಲುಗಳು

**ಬಿ**ಸ್‌ಕೇಕ್ (**Bishkek**) ಮಧ್ಯೆ ಏಷ್ಯಾದಲ್ಲಿರುವ ಕಿರ್ಗಿಸ್ತಾನದ ರಾಜಧಾನಿ. ಈ ದೇಶದ ಅತ್ಯಂತ ದೊಡ್ಡ ನಗರ ಓಶ್ (**Osh**). ರೋಮ್‌ನಷ್ಟೇ ಪುರಾತನ ಇತಿಹಾಸ ಹೊಂದಿರುವ, ಶತಮಾನಗಳಿಂದ ಹಲವು ಸಂಸ್ಕೃತಿ, ಜನಾಂಗಗಳನ್ನು ಪೋಷಿಸುತ್ತಿರುವ ನಗರವಿದು. ಜನಸಂಖ್ಯೆ ಕೇವಲ ಮೂರು ಲಕ್ಷ.

ನನ್ನ ಈ ಬಾರಿಯ ಬೇಸಿಗೆ ರಜೆಯ, ಒಂಟಿ ಸೈಕಲ್ ಪ್ರವಾಸಕ್ಕೆ, ನಾನು ಆಯ್ದುಕೊಂಡದ್ದು ಓಶ್. ಯಾವುದೇ ಸೈಕಲ್ ಸವಾರರ ನಿಪುಣತೆಗೆ, ಅವರ ದೈಹಿಕ ಮತ್ತು ಮನೋಬಲಕ್ಕೆ ಪ್ರಬಲ ಸವಾಲೊಡ್ಡುವ ಪಾಮಿರ್ ಹೆದ್ದಾರಿಯನ್ನು ದಾಟುವುದು ಖುಷಿಯ ಸಂಗತಿಯೇ. ಕಿರ್ಗಿಸ್ತಾನಕ್ಕೆ ತಾಗಿಕೊಂಡೇ, ಅದರ ನೈರುತ್ಯ ದಿಕ್ಕಿನಲ್ಲಿರುವ, ಮಧ್ಯೆ ಏಷ್ಯಾದ ಇನ್ನೊಂದು ದೇಶ ತಾಜಕಿಸ್ತಾನದ (**Tajikistan**) ರಾಜಧಾನಿ ದುಶಾನ್‌ಬೆ ನಿಂದ (**Dushanbe**) ಶುರುವಾಗುವ **1300** ಕಿ.ಮೀ ಉದ್ದದ ಹೆದ್ದಾರಿ ಪಾಮಿರ್. ದುರ್ಗಮ ಗುಡ್ಡ, ಬೆಟ್ಟ, ಪರ್ವತ, ಕಡಿದಾದ ಕಣಿವೆಗಳ ಮೂಲಕ ಹಾದು, ಅದ್ಭುತ ದೃಶ್ಯಾವಳಿಗಳಿಂದ ಕೂಡಿದೆ. ಈ ಹೆದ್ದಾರಿ ತಾಜಕಿಸ್ತಾನದ ಗಡಿ ದಾಟಿ, ಕೊನೆಗೊಳ್ಳುವುದು ಗಡಿಯಿಂದ **180** ಕಿ ಮೀ ದೂರವಿರುವ ಓಶ್ ನಗರದಲ್ಲಿ.